# ರೆಹಮಾನ್ ಪ್ರಯೋಗಕ್ಕೆ ಮತ್ತೆ ಬಂತು ಕಾಲ


ಎ.ಆರ್. ರೆಹಮಾನ್ ಪ್ರಯೋಗಗಳು ಕಳೆದ ಕೆಲವು ವರ್ಷಗಳಿಂದ ಫಲ ಕೊಟ್ಟಿದ್ದು ಅರ್ಥಾತ್ ಜನಪ್ರಿಯ ಆದದ್ದು ಕಡಿಮೆ. ಆಗೀಗ ಅವರು ಪುಟಿದೆದ್ದು ಜನರು ಗುನುಗುವಂತಹ ಹಾಡುಗಳನ್ನು ಕೊಡಬಲ್ಲರು ಎನ್ನುವುದಕ್ಕೆ ಎರಡು ತಾಜಾ ಉದಾಹರಣೆಗಳು ಸಿಕ್ಕಿವೆ. ಒಂದು 'ತೇರೆ ಇಷ್ಕ್ ಮೈಂ' ಹಿಂದಿ ಸಿನಿಮಾದ ಅದೇ ಸಾಲಿನ ಸಾಹಿತ್ಯ ಒಳಗೊಂಡ ಹಾಡೊಂದು ಹಿಟ್ ಆಗಿರುವುದು. ಇನ್ನೊಂದು ತೆಲುಗಿನ 'ಪೆದ್ದಿ' ಸಿನಿಮಾದ 'ಚಿಕಿರಿ ಚಿಕಿರಿ' ಗೀತೆಯ ಲಯ ಹಾಗೂ ನೃತ್ಯದ ಕೆಲವು ಪಲುಕುಗಳು ಅಯಸ್ಕಾಂತೀಯ ಆಗಿರುವುದು.

ಆನಂದ್ ಎಲ್. ರೈ ನಿರ್ದೇಶನದ 'ತೇರೆ ಇಷ್ಕ್ ಮೈಂ' ಸಿನಿಮಾ ಹಾಡನ್ನು ಅರಿಜಿತ್ ಸಿಂಗ್ ಹಾಡಿದ್ದಾರೆ. ಭಗ್ನ ಪ್ರೇಮಿಯ ಆರ್ತನಾದದಂತಹ ಆ ಹಾಡನ್ನು ನೋವಿನಲ್ಲಿ ಅದ್ದಿ ತೆಗೆದಂತೆ ಅವರು ಪ್ರಸ್ತುತಪಡಿಸಿರುವುದು ಜನಮೆಚ್ಚಲು ಮುಖ್ಯ ಕಾರಣ. ಸಂಗೀತದ ಸೂಕ್ಷ್ಮದಿಂದ ನೋಡಿದರೆ, ಆ ಗೀತೆಯ ಸ್ವರ ಚೌಕಟ್ಟಿಗೆ ಅರ್ಥಪೂರ್ಣವಾಗಿ ಹೊಂದಬಲ್ಲ ವಾದ್ಯ ಸಂಯೋಜನೆ ಇರುವುದು ಗೊತ್ತಾಗುತ್ತದೆ. ಒಂದೆಡೆ ವಯೊಲಿನ್ ಬಳಕೆಯು ಎದೆಯ ಆಳಕ್ಕೇ ನಾದದಲೆ ಇಳಿಸುವಷ್ಟು ತೀವ್ರವಾಗಿದೆ.

ಇನ್ನು, 'ಚಿಕಿರಿ' ತೆಲುಗು ಗೀತೆಯ ಲಯ ಆಸಕ್ತಿಕರ. 'ಡೆಲ್ಲಿ 6' ಹಿಂದಿ ಸಿನಿಮಾದಲ್ಲಿನ 'ಮಸಕ್ಕಲಿ' ಗೀತೆಯ ಲಾಲಿತ್ಯ ಮರೆಯಲಾಗದು. ಆ ಹಾಡನ್ನು ಹಾಡಿದ್ದವರು ಮೋಹಿತ್ ಚೌಹಾಣ್. ನಾಭಿಯಿಂದ ಧ್ವನಿ ತರಂಗಗಳನ್ನು ಎಳೆದು ತಂದು ಸ್ವರದ ಮೇಲೆ ಕೂರಿಸುವಂತೆ ಹಾಡುವ ಮಾಯ್ಕಾರ ಅವರು. 'ಚಿಕಿರಿ' ಹಾಡಿನ ತೆಲುಗು ಸಾಹಿತ್ಯವನ್ನೂ ತಮ್ಮದಾಗಿಸಿಕೊಂಡು ಅವರು ಅಂಥದ್ದೇ ಹಾಡು ಕೊಟ್ಟಿದ್ದಾರೆ. ಈ ಹಾಡಿನಲ್ಲಿ ಪಿಯಾನೊ ಬಳಕೆಯನ್ನು ರೆಹಮಾನ್ ಮುಂದು ಮಾಡಿದ್ದಾರೆ.

'ಚಿಕಿರಿ' ಹಾಡಿಗೆ ನಟ ರಾಮ್‌ಚರಣ್ ಕುಕ್ಕರಗಾಲಿನಲ್ಲಿ ಕುಳಿತು ಎರಡೂ ಕಾಲುಗಳನ್ನು ಆಡಿಸುವಂತೆ ಮಾಡಿರುವ ನೃತ್ಯವೀಗ ಜನಪ್ರಿಯ. ಅದನ್ನೇ ಅನುಕರಿಸಿ, ಎಷ್ಟೋ ಮಂದಿ ರೀಲ್ಸ್ ಮಾಡುತ್ತಿರುವುದು ಅದರ ಮೋಡಿಗೆ ಸಾಕ್ಷಿ. ಸುಮಾರು ಐದು ಕೋಟಿ ಮಂದಿ ಐದಾರು ದಿನಗಳಲ್ಲೇ ಯೂಟ್ಯೂಬ್‌ನಲ್ಲಿ ಈ ಹಾಡನ್ನು ನೋಡಿದ್ದಾರೆ. ನಿರ್ದೇಶಕ ಬುಚ್ಚಿ ಬಾಬು ಸನಾ ಅವರಿಗೆ ಈ ಗೀತೆಯೇ ಚಿತ್ರಪ್ರಚಾರಕ್ಕೆ ಅಗತ್ಯವಿದ್ದ ಇಂಧನವಾಗಿ ಒದಗಿಬಂದಿದೆ. ಶ್ರೀದೇವಿ ಪುತ್ರಿ ಜಾಹ್ನವಿ ಗ್ಲ್ಯಾಮರ್ ತೋರಿಕೆ ಬಗ್ಗೆ ಟೀಕೆ ವ್ಯಕ್ತವಾಗುತ್ತಿದ್ದು, ಅದೂ ಸಿನಿಮಾ ಪ್ರಚಾರಕ್ಕೆ ವರದಾನವೇ ಆಗಲಿದೆ ಎಂಬ ವಿಶ್ಲೇಷಣೆ ಇದೆ.

ಸಿನಿಮಾ ಸಂಗೀತದಲ್ಲಿ ದೇಸಿ ಶಾಸ್ತ್ರೀಯ ರಾಗಗಳನ್ನು ಹೆಚ್ಚು ಹೆಚ್ಚಾಗಿ ಬಳಸಬೇಕು ಎಂದು ಸ್ವರ ಸಂಯೋಜಕ ಅನಿರುದ್ಧ್ ರವಿಚಂದರ್ ಅವರಿಗೆ ರೆಹಮಾನ್ ಕೆಲವು ತಿಂಗಳುಗಳ ಹಿಂದೆ ಸಲಹೆ ನೀಡಿದ್ದರು. ಈಗ ಅದರ ಪ್ರಾತ್ಯಕ್ಷಿಕೆ ಎಂಬಂತೆ ಎರಡು ಗೀತೆಗಳು ಜನಮನ ಗೆದ್ದಿವೆ. ಮತ್ತೆ ರೆಹಮಾನ್ ಫಾರ್ಮ್‌ಗೆ ಮರಳಿದ್ದಾರೆ; ಅದೂ ಅಪರೂಪಕ್ಕೆಂಬಂತೆ ತೆಲುಗು ಚಿತ್ರಗೀತೆಯಿಂದ. ■


ಎ.ಆರ್. ರೆಹಮಾನ್

# ತಾರಾಗಿರಿಯ ಜ್ವಾಲಾಮುಖಿ

ತಾರಾಗಿರಿ ಶಾಶ್ವತ ಅಲ್ಲ ಎಂಬ ನೀತಿಸಾಲನ್ನು ಹಿಂದಿ ನಟ ಅಮಿತಾಭ್ ಇತ್ತೀಚೆಗೆ ಉಲ್ಲೇಖಿಸಿದರು. ಅದಕ್ಕೆ ಪುಷ್ಟಿಯಾಗಿ ಹಳೆಯ ಘಟನೆಯೊಂದನ್ನು ಮೆಲುಕು ಹಾಕಿದರು.

'ಹಮ್' ಹಿಂದಿ ಸಿನಿಮಾ ಚಿತ್ರೀಕರಣ ನಡೆಯುತ್ತಿತ್ತು. ಗೋವಿಂದಾ ಹಾಗೂ ಅಮಿತಾಭ್ ಇಬ್ಬರೂ ಸೆಟ್‌ನಲ್ಲಿ ಇದ್ದರು. ಆಗ ಯುವಕ ಯುವತಿಯರ ಗುಂಪೊಂದು ಬಂದಿತು. ಒಬ್ಬನು ಅಮಿತಾಭ್ ಅವರಲ್ಲಿ ಆಟೊಗ್ರಾಫ್ ಮೊರೆಯಿಟ್ಟ. ಪಕ್ಕದಲ್ಲಿ ಇದ್ದ ಹುಡುಗಿಯೊಬ್ಬಳು ಅವನ ಕಪಾಳಕ್ಕೆ ಒಂದು ಏಟು ಕೊಟ್ಟು, 'ಅವರ ಆಟೊಗ್ರಾಫ್ ಅಲ್ಲ... ಗೋವಿಂದಾ ಅವರದ್ದು ತಗೊ' ಎಂದು ಬುದ್ಧಿ ಹೇಳಿದಳು. ತಕ್ಷಣಕ್ಕೆ ಅಮಿತಾಭ್ ಅವರಿಗೆ ಅಚ್ಚರಿ ಆಯಿತಾದರೂ, ತಮ್ಮ ತಾರಾಗಿರಿಯ ಕಾಲ ಮುಗಿದಿದೆ ಎನ್ನುವುದು ಅರಿವಾಯಿತು. ಅವರು ನಮ್ರತೆಯಿಂದ ಗೋವಿಂದಾ ಅವರನ್ನು ಆಟೊಗ್ರಾಫ್ ನೀಡಲು ಮುಂದಕ್ಕೆ ಬಿಟ್ಟರು.

'ವರ್ಷಗಳು ಉರುಳಿದಂತೆ ಅಭಿನಯ ಉತ್ತಮಪಡಿಸಿಕೊಳ್ಳುವುದಕ್ಕೆ ಆದ್ಯತೆ ನೀಡುತ್ತಾ ನಟ ನಟಿಯರು ಇದ್ದುಬಿಡುತ್ತಾರೆ. ವಯಸ್ಸು ಆಗುತ್ತಾ ಹೋದಂತೆ ತಮ್ಮ ತಾರಾಗಿರಿ ಯಾವಾಗ ಕುಂದಿದೆ ಎನ್ನುವುದು ಗೊತ್ತಾಗುವುದೇ ಇಲ್ಲ. ಆಗ ಇಂತಹ ಘಟನೆಗಳೇ ಆ ಭ್ರಮೆಯ ಬಲೂನಿಗೆ ಸೂಜಿಮೊನೆ ತಾಕಿಸುತ್ತವೆ' ಎಂಬರ್ಥದಲ್ಲಿ ಅಮಿತಾಭ್ ಮಾತಾಡಿದರು.


ಗೋವಿಂದಾ


ಅಮಿತಾಭ್

ಈಗ ಗೋವಿಂದಾ ಅವರಿಗೂ ಅರವತ್ತೊಂದು ವರ್ಷ ವಯಸ್ಸಾಯಿತು. ಅವರು ವಿಪರೀತ ವ್ಯಾಯಾಮ ಮಾಡಿ ಕುಸಿದುಬಿದ್ದು, ಆಸ್ಪತ್ರೆಯಲ್ಲಿ ಒಂದಿಷ್ಟು ಪರೀಕ್ಷೆಗಳನ್ನು ಮಾಡಿಸಿಕೊಂಡು ಬಂದರು. ಯೋಗ, ಸಣ್ಣಪುಟ್ಟ ವ್ಯಾಯಾಮ ಅಷ್ಟೇ ಮಾಡಿಕೊಂಡು ಇದ್ದುಬಿಡಬೇಕು ಎಂದು ಅವರು ತಮಗೆ ಆದ ಜ್ಞಾನೋದಯದ ವಿಷಯ ಹಂಚಿಕೊಂಡರು.

ಈಗ ಅಮಿತಾಭ್ ಅವರ ತಾರಾಗಿರಿ ಗೋವಿಂದಾ ಅವರಿಗಿಂತ ತುಸು ಮೇಲೆಯೇ ಇದೆಯೆನ್ನಬಹುದು. ಇದು ಕಾಲದ ಮಹಿಮೆ. ■